ಸಂತೆಯ ದಿನ ಮನೆಗೆ ಬಂದ ಆಗಂತುಕನೊಬ್ಬ ಅಲ್ಲೇ ಪಡಸಾಲೆಯಲ್ಲಿ ಹೋಂ ವರ್ಕ್ ಮಾಡಿಕೊಂಡು ಕೂತಿದ್ದ ನನ್ನನ್ನು ಮೇಲಿಂದ ಕೆಳಕ್ಕೆ ಕಣ್ತುಂಬ ನೋಡಿ 'ಒಳ್ಳೆಯದಾಗಲಿ' ಎಂದು ತಲೆ ಸವರಿ ಹಾರೈಸಿ ಹೋಗಿದ್ದ. ಕೂಸಿದ್ದಾಗ ನನ್ನನ್ನು ಹಾಗೆ ಎತ್ತಿಕೊಂಡು ಹೋಗಿದ್ದ 'ದಂ-ಪತಿ' ಆತನೇ ಎಂದು ಮನೆಯ ಮಂದಿ ನಂತರ ಕತೆ ಮಾಡಿ ಹೇಳಿದ್ದರು, ನನಗೆ. ಈಗಲೂ ನಾನು ಕೈಚಾಚಿ ಕರೆದವರ- ಕೈಗೂಸು ಆಗಲು ಸದಾ ಸಿದ್ಧ.

* * *

ನನ್ನ ಪ್ರಾಥಮಿಕ ಶಾಲಾ ದಿನಗಳಲ್ಲಿ ಪಠ್ಯ ಪುಸ್ತಕದಲ್ಲಿದ್ದ ಕವಿ ಅಂಬಿಕಾತನಯದತ್ತರ ಜನಪ್ರಿಯ 'ಕರಡೀ ಕುಣಿತ' ಕವನದಲ್ಲಿನ ಸಾಲು 'ಕಂಬಳಿ ಹೊದ್ದಾಂವ ಬಂದಾನ, ಕರಡಿಯನಾಡಿಸುತ ನಿಂದಾನ...' ಎಂದು ರಾಗವಾಗಿ ಕಂಠಪಾಠ ಮಾಡಿಕೊಳ್ಳುತ್ತಿದ್ದ ಆ ದಿನಗಳಲ್ಲೇ ಊರಿಗೆ ಕರಡಿ ಆಡಿಸುವ ಅಲೆಮಾರಿ ಕುಟುಂಬವೊಂದು ಕಾಕತಾಳೀಯವೆಂಬಂತೆ ಅದೆಲ್ಲಿಂದಲೊ ಬಂದು, ಹಾಳು ಬಿದ್ದ ಮಸೀದಿಯಲ್ಲಿ ಬೀಡುಬಿಟ್ಟಿತ್ತು. ನಮಗಾಗ ಖುಷಿಯೋ ಖುಷಿ.

ಊರಿನ ತಲೆಮಾಸಿದ ರಸಿಕರು ಒಂದು ದಿನ ಚಂದಾ ಎತ್ತಿ ಡಂಗೂರ ಹೊಡೆಸಿ, ಉಸುಗಿನ ಕಟ್ಟೆಯಲ್ಲಿ ಕರಡಿ ಜೊತೆಗೆ ಮನುಷ್ಯನ ಕುಸ್ತಿ ಏರ್ಪಡಿಸುತ್ತಿದ್ದುದುಂಟು. ಕರಡಿಯು ಹಾಕುತ್ತಿದ್ದ ಆ ಪಟ್ಟುಗಳು, ವಾಹ್! ಪಳಗಿಸಿದ್ದ ಆ ಸಾಕು ಕರಡಿ ತನ್ನ ಯಜಮಾನ ಹೇಳಿದಂತೆ ಲಾಗ ಹಾಕುವುದಿರಲಿ, ಆತ ತುಂಬಿ ಕೊಟ್ಟ ಮುಸಿಯನ್ನು ಸೇದುತ್ತಿದ್ದ 'ಭಂಗಿ'ಯನ್ನು ನೋಡಬೇಕಿತ್ತು!

ಮೈಸೂರಿನ ಪ್ರಾಣಿ ಸಂಗ್ರಹಾಲಯದಲ್ಲಿ ಕಟಾಂಜನದ ಹಿಂದೆ ಬಂಧಿಸಿಟ್ಟ ಕರಡಿಯನ್ನು ದೂರ ನಿಂತು ನೋಡುವುದಕ್ಕೂ; ಪಳಗಿಸಿದ ಸಾಕು ಕರಡಿಯ ಮೈಯನ್ನು ನಾವು ಮಕ್ಕಳು ಕೈಯಾರೆ ಸವರಿ ಪುಳಕಗೊಳ್ಳುವುದಕ್ಕೂ ವ್ಯತ್ಯಾಸವಿರುತ್ತದಲ್ಲವೆ? ಸದಾ ಅಳುತ್ತ ಕಿರಿಕಿರಿ ಮಾಡುವ ಮಕ್ಕಳ ತಾಯಂದಿರು ಕರಡಿಯ ಕೂದಲೊಂದನ್ನು ಇಸಗೊಂಡು ಕೊರಳಲ್ಲಿ ತಾಯಿತದಂತೆ ಕಟ್ಟುವ ಪರಿಪಾಠವಿತ್ತು. ರಾತ್ರಿ ಅಳುವ ಮಗುವನ್ನು ಸುಮ್ಮನಿರಿಸಲು ಕರೀ ಕತ್ತಲೆಯತ್ತ ಬೆರಳು ತೋರಿಸಿ 'ಅಗೋ ಕರಡಿ ಬಂತು' ಎಂದು ಹೇಳಿ ಬಾಯಿ ಮುಚ್ಚಿಸಿ ಮಲಗಿಸುತ್ತಿದ್ದ ದಿನಗಳಿನ್ನೂ ನೆನಪಿವೆ.

* * *

ನಮ್ಮ ಮನೆಯ ಪಡಸಾಲಿಯಲ್ಲಿ ಸ್ಥಾಪಿಸಲಾಗಿದ್ದ ಮೂರು ಬೀಸುವ ಕಲ್ಲುಗಳು, ಅಂಗಳದಲ್ಲಿ ಹಾಸುಗಲ್ಲಿನ ಮೇಲೊಂದು ಅರೆಯುವುದಕ್ಕಾಗೆ ವಿಶೇಷವಾಗಿ ರೂಪಿಸಿದ್ದ ಹಾಸು ಬಂಡೆಯ ಮೇಲೊಂದು ಭಾರವಾದ ಗುಂಡು ಕಲ್ಲು. ಪಡಸಾಲೆಯಲ್ಲಿ ನೆಲಕ್ಕೆ ಅಂಟಿಸಿದ್ದ ಕಲ್ಲಿನ ಒರಳು - ಕಬ್ಬಿಣದ ಅಣಸು ಹಾಕಿದ್ದ ಕುಟ್ಟುವ ಒನಕೆಗಳು ನಮ್ಮ ಮನೆಯಲ್ಲಿ ಆಗ ಆದರಣೀಯ ಸರಕುಗಳು. ಅವು ನನ್ನ ಅಪ್ಪನ ಒಡಹುಟ್ಟಿದಕ್ಕ - ಹನುಮತ್ತೆಯ ಆಸ್ತಿ. ಆಕೆಯದೇ ನಿರ್ವಹಣೆಯ ಜವಾಬ್ದಾರಿ. ಬೇಳೆ ಒಡೆಯುವ ಸಣ್ಣ ಕಲ್ಲು ಮಾತ್ರ ಪೋರ್ಟೆಬಲ್- ಅವರಿವರ ಮನೆಗೆ ಸಂಚಾರ ಹೋಗಿ ಬರುತ್ತಿತ್ತು. ಅದನ್ನು ಕಾಳು ಹಸನು ಮಾಡುವ ಗರತಿಯರು ಕೇರುವ ಮೊರದಲ್ಲಿಟ್ಟುಕೊಂಡೆ ತೊಗರಿ, ಕಡಲೆ ಬೇಳೆ ಒಡೆಯುವ ಸಾಧನ ಅದು. ಇನ್ನು ಪಡಸಾಲೆಯ ನೆಲಕ್ಕೆ ಲಗತ್ತಾಗಿದ್ದ ನುಚ್ಚು(ರವೆ )ಮಾಡಿಳ್ಳುವುದು ಮಧ್ಯಮ ಗಾತ್ರದ ಕಲ್ಲಿನಿಂದಾದರೆ; ಹಿಟ್ಟು ಬೀಸುವ ಕಲ್ಲು ಭಾರವಾಗಿದ್ದು, ಇಬ್ಬರು ಮೂವರು ಹೆಣ್ಣುಮಕ್ಕಳು ಕಾಲು ಮಡಿಸಿಕೊಂಡು ಎದುರು ಬದುರು ಕೂತು ಕಲ್ಲಿನ ಬಾಯಿಗೆ ಮುಕ್ಕು ಹಾಕುತ್ತ ಬೀಸಬೆಕು. ತಿರುಗುವ ಕಲ್ಲಿನ ಆ ಶಬ್ದಕ್ಕೆ ಶ್ರುತಿ ಸೇರಿದಂತೆ ರಾಗವಾಗಿ ದನಿಯೆತ್ತಿ ಹಾಡಿಕೊಂಡು ಗಂಟೆಗಟ್ಟಲೆ ಜೋಳ ಬೀಸಿ ಹಿಟ್ಟು ಮಾಡಿಕೊಳ್ಳಲು ತೊಡಗಿದಾಗ ಮಾಳಿಗೆಯ ಮೇಲೆ ಗಾಳಿಗೆ ಮಲಗಿರುತ್ತಿದ್ದ ನನಗೆ ಸರವೆತ್ತಿ ಜೋಗುಳ ಹಾಡುವ ಸಂಗೀತ ಕಚೇರಿಯ ಅನುಭವ ನೀಡುತ್ತಿತ್ತು. ಅದೆಂಥಾ ಸುಖ! ಇವತ್ತಿನ ಪ್ಲಾಸ್ಟಿಕ್ ಯುಗಕ್ಕಿಂತ ಬಾಲ್ಯದ ಶಿಲಾಯುಗವೇ ಅದ್ಭುತವಾಗಿತ್ತು ನನ್ನ ಪಾಲಿಗೆ!

ಕಲ್ಲವ್ವ ಮಾತಾಯಿ ಮೆಲ್ಲವ್ವ ಜ್ವಾಳಾವ<br>
ಜಲ್ಲ ಜಲ್ಲಾನೆ ಉದುರವ್ವ, ನಾ ನಿನಗ<br>
ಬೆಲ್ಲದಾರುತಿಯ ಬೆಳಗೇನ

ನಿಪ್ಪಾಣಿ ಕಡೆಯ ಕುರಿಗಾಹಿಗಳು ಹಾಗೆ ದೂರದಿಂದ ವಲಸೆ ಬಂದವರಾಗಿ ನನ್ನೂರಿನ ಹತ್ತಿರದ ಹೊಲಗಳಲ್ಲಿ ಕುರಿ ಹಿಂಡು ತರುಬಿದಾಗ; ಮೂಟೆಗಟ್ಟಲೇ ಜೋಳ ಹೊತ್ತು ಬಂದು ನಮ್ಮ